ಒಂದರಲ್ಲಿ ಜೆಸ್ಸಿ ಹಾಗೂ ಶ್ರೀಮಂತ ಯುವತಿ ಇರುವ ಚಿತ್ರವೊಂದು ಪತ್ರಿಕೆಯಲ್ಲಿ ಪ್ರಕಟಗೊಂಡಾಗ ಆತನ ಮೊದಲ ಪ್ರಿಯತಮೆಯ ಮನಸ್ಸಿನಲ್ಲಿ ಉಂಟಾಗುವ ತಳಮಳವನ್ನು ಚಿತ್ರ ಪರಿಣಾಮಕ್ಕಾಗಿ ಪ್ರತಿಬಿಂಬಿಸಿದೆ.

ನಾಜಿ ಸರ್ಕಾರದ ವಿರುದ್ಧ ಜೆಸ್ಸಿ ಓವೆನ್ಸ್‌ರನ್ನು ಉಪಯೋಗಿಸಿಕೊಳ್ಳುವ ಜಾಣ ನಿರ್ಧಾರಕ್ಕೆ ಅಮೆರಿಕ ಒಲಿಂಪಿಕ್ಸ್ ಸಮಿತಿ ಬಂದರೂ ಜೆಸ್ಸಿಯಂತಹ ಕಪ್ಪು ಜನರ ಬಗೆಗಿರುವ ಅನಾದರ, ತಾರತಮ್ಯವೇನೂ ಬದಲಾಗುವುದಿಲ್ಲ. ಈ ನೋವಿನ ಸಂಗತಿ ಜೆಸ್ಸಿಯನ್ನು ಬಾಧಿಸಿದರೂ ಮರುಗುವುದನ್ನು ಬಿಟ್ಟು ಬೇರೇನನ್ನೂ ಆ ಸಂದರ್ಭದಲ್ಲಿ ಮಾಡುವ ಮಾಡಲು ಅವನಿಗೆ ಸಾಧ್ಯವಾಗುವುದಿಲ್ಲ.

ಇಂತಹ ಅಡ್ಡಿ, ಆತಂಕಗಳನ್ನೆಲ್ಲ ಎದುರಿಸಿ ಅಂತಿಮವಾಗಿ ಬರ್ಲಿನ್ ಒಲಿಂಪಿಕ್ಸ್‌ಗೆ ಜೆಸ್ಸಿ ಓವೆನ್ಸ್ ತನ್ನ ಕೋಚ್ ಲಾರ್‍ರಿ ಜೊತೆಗೆ ಹಡುಗಿನಲ್ಲಿ ಹೊರಡುವುದರಿಂದ ಚಿತ್ರ ಇನ್ನೊಂದು ರೋಚಕಘಟ್ಟ ಮುಟ್ಟುತ್ತದೆ. ಯಾವುದೇ ಕಾರಣಕ್ಕೂ ಆರ್ಯ ಸಾರ್ವಭೌಮತ್ವವನ್ನು ಮೆರೆಸಬೇಕೆಂಬ ಹಿಟ್ಲರ್ ಆಸೆಗೆ ಜೆಸ್ಸಿ ಮೊದಲಿಗೆ ಉತ್ತರ ಕೊಟ್ಟಿದ್ದು ಲಾಂಗ್ ಜಂಪ್ ಸ್ಪರ್ಧೆಯಲ್ಲಿ.




'ರೇಸ್' ಚಿತ್ರದ ದೃಶ್ಯ

ಹಿಟ್ಲರ್, ಜೆಸ್ಸಿ ಬಗ್ಗೆ ಅಸೂಯೆ ಹೊಂದಿದ್ದರೂ ಜರ್ಮನಿಯ ಜನತೆ ಜೆಸ್ಸಿ ಕುರಿತು ತೋರಿಸುತ್ತಿದ್ದ ಪ್ರೀತಿ ಅವರ್ಣನೀಯವಾಗಿತ್ತು. ಜನರು ಜೆಸ್ಸಿ ಹೆಸರು ಹೇಳಿ ಖುಷಿಪಡುವ ಸನ್ನಿವೇಶಗಳನ್ನು ಈ ಚಿತ್ರಕ್ಕಾಗಿ ಮರುಸೃಷ್ಟಿಸಿರುವ ಬೃಹತ್ ಕ್ರೀಡಾಂಗಣದಲ್ಲಿ ಸಮರ್ಥವಾಗಿ ಸೆರೆ ಹಿಡಯಲಾಗಿದೆ.

ಅರ್ಹತಾ ಸುತ್ತಿನಲ್ಲಿ ವಿಫಲರಾದರೂ ಎದುರಾಳಿ ಜರ್ಮನ್ ಲಾಂಗ್ ಜಂಪ್ ಪಟು ಲುಜ್ ಲ್ಯಾಂಗ್ ನೀಡಿದ ಸಲಹೆಯಂತೆ ಕೊಂಚ ಬದಲಾವಣೆ ಮಾಡಿಕೊಂಡು ಲಾಂಗ್ ಜಂಪ್ ಮಾಡಿದ ಜೆಸ್ಸಿ ಓವೆನ್ಸ್ ವಿಶ್ವ ದಾಖಲೆ ಮಾಡಿದ್ದು, ಅದು ಮುಂದಿನ 25 ವರ್ಷ ಮುರಿಯದೇ ಉಳಿದದ್ದು ಈಗ ಇತಿಹಾಸ.

ಜೆಸ್ಸಿ ಓವೆನ್ಸ್ ಲಾಂಗ್ ಜಂಪ್ ಸಾಧನೆಯಿಂದ ಸಿಡಿಮಿಡಿಗೊಂಡ ಹಿಟ್ಲರ್ ನಡವಳಿಕೆ ಸಿನಿಮಾದಲ್ಲಿ ನೋಡುಗರ ಕಣ್ಣಿಗೆ ರಾಚುವಂತಿದ್ದು ಜೆಸ್ಸಿ ಅವರ ದೈತ್ಯ ಸಾಧನೆಯ ಪರಿಚಯವನ್ನು ಅದು ನಿಚ್ಚಳವಾಗಿ ಮಾಡಿಸುತ್ತದೆ.

ಮುಂದೆ ಜೆಸ್ಸಿ ಓವೆನ್ಸ್, 100 ಮೀಟರ್, 200 ಮೀಟರ್ ಓಟಗಳಲ್ಲಿಯೂ ಚಿನ್ನದ ಪದಕ ಗೆದ್ದು, 4X100 ಮೀಟರ್ ರಿಲೇ ಓಟದಲ್ಲೂ ಪಾಲ್ಗೊಂಡು ಅಮೆರಿಕ ತಂಡಕ್ಕೆ ಅಗ್ರಸ್ಥಾನ ತಂದುಕೊಟ್ಟರು. ಬಿಳಿಯರು ಗೆದ್ದಾಗ ಅಭಿನಂದಿಸುತ್ತಿದ್ದ ಸರ್ವಾಧಿಕಾರಿ ಹಿಟ್ಲರ್, ನಿಗ್ರೊ ಜೆಸ್ಸಿ ಓವೆನ್ಸ್ ಪದಕಗಳನ್ನು ಕೊಳ್ಳೆ ಹೊಡೆದಾಗ ಹಸ್ತಲಾಘವ ನೀಡದೆ ತಪ್ಪಿಸಿಕೊಂಡಿದ್ದು ಚಿತ್ರದ ಪ್ರಮುಖ ದೃಶ್ಯವಾಗಿದೆ.